ಇರುವ ವಿಧಾನವನ್ನು ಅನುಸರಿಸುವುದಲ್ಲ. ನಿಮ್ಮ ಭಾವನೆಗಳು ಮತ್ತು ಆಲೋಚನೆಗಳಿಗೆ ತಕ್ಕುದಾದ ನಿಮ್ಮದೇ ವಿಧಾನವನ್ನು ಅನುಸರಿಸಬೇಕು. ನಿಮ್ಮ ಬದುಕನ್ನು ಅದು ಇರುವಂತೆಯೇ ಒಪ್ಪಿಕೊಳ್ಳಬೇಕು. ಬೇರೆಯವರಂತೆ ಬದುಕಬಾರದು. ಎಲ್ಲರ ಹೆಬ್ಬೆಟ್ಟಿನ ಗುರುತು ಒಂದೇ ರೀತಿ ಇರುವುದಿಲ್ಲ. ನಿಮ್ಮ ಹೆಬ್ಬೆಟ್ಟಿನ ಗುರುತಿನ ಪ್ರಕಾರವೇ ನೀವು ನಡೆಯಬೇಕು.

◆ **ಪ್ರತಿ ಕತೆಯು ಅಂತ್ಯದೊಂದಿಗೆ ಆರಂಭವಾಗುತ್ತದೆ. ಅಂತ್ಯ ಏನು ಎಂದು ತಿಳಿಯದಿದ್ದರೆ ಕತೆಯಿಲ್ಲ ಎಂದು ನೀವೊಮ್ಮೆ ಹೇಳಿದ್ದಿರಿ.**

ಕಲಾವಿದನ ಕೆಲಸ ಶುರುವಾಗುವುದು ಕ್ರಿಯೆಯ ಪರಿಣಾಮಗಳಿಂದಲೇ ಹೊರತು ಕ್ರಿಯೆಗಳಿಂದಲ್ಲ ಅಥವ ಘಟನೆಗಳಿಂದಲೂ ಅಲ್ಲ. ಅದನ್ನು ನೀವು ಪ್ರತಿಧ್ವನಿಗಳೆಂದು ಕರೆಯಬಹುದು. ಆ ಅರ್ಥದಲ್ಲಿ ನನ್ನ ಬದುಕಿನಲ್ಲಿ ನಡೆದ ಸಣ್ಣದೊಂದು ಘಟನೆಯನ್ನು ಅರ್ಥಮಾಡಿಕೊಳ್ಳಲು ಹತ್ತು ವರ್ಷಗಳು ಹಿಡಿದವು. ಏನು ನಡೆಯಿತೋ ಅದನ್ನು ಯಥಾವತ್ತಾಗಿ ಹೇಳಬಹುದಿತ್ತು. ಆದರೆ, ಅದರ ಪರಿಣಾಮದ ಅರಿವಾದಾಗ ಅದರರ್ಥ ತಿಳಿಯಿತು. ನನಗೆ ಕತೆಯ ಅಂತ್ಯ ಗೊತ್ತಿಲ್ಲದಿದ್ದರೆ ಕತೆಯನ್ನು ಆರಂಭಿಸುವುದಿಲ್ಲ. ನಾನು ಯಾವಾಗಲೂ ಕತೆಯ ಕೊನೆಯ ಸಾಲುಗಳು, ಕೊನೆಯ ಪ್ಯಾರಾ, ಕೊನೆಯ ಪುಟವನ್ನು ಮೊದಲಿಗೆ ಬರೆಯುತ್ತೇನೆ. ಆಮೇಲೆ ಹಿಂದಕ್ಕೆ ಹೋಗಿ ಮೊದಲಿನಿಂದ ಬರೆಯಲು ಶುರುಮಾಡುತ್ತೇನೆ. ಯಾವ ಕಡೆಗೆ ಹೋಗುತ್ತಿದ್ದೇನೆ, ನನ್ನ ಗುರಿಯೇನು ಎಂದು ಗೊತ್ತಿರುತ್ತದೆ. ಅಲ್ಲಿಗೆ ತಲುಪುವುದು ಹೇಗೆ ಎನ್ನುವುದು ದೇವರ ಇಚ್ಛೆಗೆ ಬಿಟ್ಟದ್ದು.

◆ **ಕಲಾಕೃತಿಯ ಕೊನೆಯ ಕುರಿತು ದೃಢಸಂಕಲ್ಪವಿರಬೇಕು ಎನ್ನುವುದು ಕಲೆಗಾರನ ಕೆಲಸದ ಕುರಿತಾದ ವಿಶಿಷ್ಟ ದೃಷ್ಟಿಕೋನ.**

ಯಾವುದೇ ನಿಜವಾದ ಕಲಾಕೃತಿಯು ನಿಮ್ಮಲ್ಲೊಂದು ಸಾಮರಸ್ಯದ ಭಾವವನ್ನು ಹುಟ್ಟುಹಾಕಬೇಕು. ಗ್ರೀಕರು ಹೇಳುವಂತೆ ಕೆಥಾರ್ಸಿಸ್ ಪರಿಣಾಮ ಬೀರಬೇಕು. ನಿಮ್ಮ ಮನಸ್ಸು ಮತ್ತು ಕಲ್ಪನೆಯನ್ನು ಶುದ್ಧಿಕರಿಸಬೇಕು. ಸಹನೀಯವಾದ ಅಂತ್ಯವು ಇದನ್ನು ಸಾಧಿಸುತ್ತದೆ. ಏಕೆಂದರೆ, ಅದೇ ಸರಿ ಹಾಗೂ ಸತ್ಯವಾಗಿರುತ್ತದೆ. ಕೆಲವೊಮ್ಮೆ ಅಂತ್ಯವು ದುರಂತವಾಗಿರುತ್ತದೆ. ಇವತ್ತಿಗೂ 'ವುದರಿಂಗ್ ಹೈಟ್ಸ್'ನ ಅಂತ್ಯ ನನ್ನನ್ನು ರೋಮಾಂಚನಗೊಳಿಸುತ್ತದೆ.

ಮೂರು ಕಾದಂಬರಿಗಳನ್ನು ನಾನು ಮತ್ತೆ ಮತ್ತೆ ಖುಷಿಗಾಗಿ ಓದುತ್ತಿರುತ್ತೇನೆ. ಅವು ನಿಜಕ್ಕೂ ಪರಿಪೂರ್ಣ ಕಾದಂಬರಿಗಳು. ರಿಚರ್ಡ್ ಹ್ಯೂಗಸ್(ಬ್ರಿಟಿಷ್ ಬರಹಗಾರ)ನ **'A High Wind in Jamaica'**, ಇ.ಎಂ. ಫಾರ್ಸ್ಟರ್(ಇಂಗ್ಲಿಷ್ ಬರಹಗಾರ)ನ **'A Passage to India'** ಮತ್ತು ವರ್ಜಿನಿಯಾ ವೂಲ್ಫ(ಇಂಗ್ಲಿಷ್ ಬರಹಗಾರ್ತಿ)ಳ **'To the Lighthouse'**. ಮೂರೂ ಕಾದಂಬರಿಗಳು ಬಗೆಹರಿಸಲು ಸಾಧ್ಯವಿಲ್ಲದ ಸಮಸ್ಯೆಯೊಂದಿಗೆ ಆರಂಭವಾಗುತ್ತವೆ. ಪ್ರತಿಯೊಬ್ಬರೂ ಗೋಜಲುಗಳನ್ನು ವ್ಯವಸ್ಥಿತವಾಗಿ ಬಿಡಿಸುವತ್ತ ಕಾರ್ಯೋನ್ಮುಖರಾಗುತ್ತಾರೆ. ಅಂದರೆ, ಎಲ್ಲವೂ ಸುಖಾಂತ್ಯ ಎಂದು ಹೇಳುತ್ತಿಲ್ಲ. **Noon Wine**ನ ಕೊನೆಯಲ್ಲಿ ಮಿ. ಥಾಮ್ಸನ್ ಆತ್ಮಹತ್ಯೆ ಮಾಡಿಕೊಳ್ಳುವುದನ್ನು ಜನ ವಿರೋಧಿಸಿದರು. ನಾನು ಹೇಳುವುದಿಷ್ಟು "ಸರಿ ಹೇಳಿ, ಅವನೇನು ಮಾಡಬಹುದಿತ್ತು?"

◆ **ನಿಮ್ಮ ಬರವಣಿಗೆಯಲ್ಲಿ ಕತೆ ಎಂದಾದರೂ ನಿಮ್ಮನ್ನು ಅಚ್ಚರಿಗೊಳಿಸಿದೆಯೇ? ಒಂದು ಪಾತ್ರ ಇದ್ದಕ್ಕಿದ್ದಂತೆ ಬೇರೇನೋ ತಿರುವು ತೆಗೆದುಕೊಂಡಿದಿಯೆ?**